# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್ – 2025 – 26

**ತರಗತಿ : 9 ನೇ ತರಗತಿ** **ವಿಷಯ : ಸಮಾಜ ವಿಜ್ಞಾನ**

**ಒಟ್ಟು ಅಂಕಗಳು : 80** **ಅವಧಿ : 3 ತಂಟೆ 15 ನಿಮಿಷ**

**1 } ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 8*1=08**

**1 } ಬೀದರ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದವರು.**

ಎ } ಮಧ್ವಾಚಾರ್ಯ ಬಿ } ರಾಮಾನುಜಾಚಾರ್ಯ

ಸಿ } ಬಸವೇಶ್ವರ ಡಿ } ಶಂಕರಾಚಾರ್ಯ

**2 } ದೆಹಲಿ ಸುಲ್ತಾನರಲ್ಲಿ ಆಳ್ವಿಕೆ ನಡೆಸಿದ ಮೊದಲ ಮಹಿಳೆ .**

ಎ } ರಜಿಯಾ ಸುಲ್ತಾನ ಬಿ } ನರ್ಗಿಸ್ ಬಾನು

ಸಿ } ಮುಮ್ತಾಜ್ ಮಹಲ್ ಡಿ } ನೂರ ಜಹಾನ್

**3 } ಭಾರತದಲ್ಲಿ ಮೂಲಭೂತ ಹಕ್ಕುಗಳ ರಕ್ಷಕನಾಗಿ ಕಾರ್ಯ ನಿರ್ವಹಿಸುವುದು.**

ಎ } ಕಾರ್ಯಾಂಗ ಬಿ } ಸರ್ವೋಚ್ಚ ನ್ಯಾಯಾಲಯ

ಸಿ } ಶಾಸಕಾಂಗ ಡಿ } ಪತ್ರಿಕಾಂಗ

**4 } ಈ ಸಮುದಾಯದಲ್ಲಿ ಮಾತೃ ಪ್ರಧಾನ ಕುಟುಂಬವು ಕಂಡು ಬರುತ್ತದೆ.**

ಎ } ಮರಾಠ ಬಿ } ನಾಯರ್

ಸಿ } ಜಾಟರು ಡಿ } ರಜಪೂತರು

**5 } ಕುಟುಂಬ ವ್ಯವಸ್ಥೆಯಲ್ಲಿ ಮೂರನೇ ಪೀಳಿಗೆಗೆ ಸೇರಲ್ಪಡುವವರು.**

ಎ } ರಕ್ತ ಸಂಬಂಧಿಗಳು ಬಿ } ಹಿರಿಯ ಪೋಷಕರು

ಸಿ } ಮಕ್ಕಳು ಡಿ } ಮೊಮ್ಮಕ್ಕಳು

**6 } ಏಷ್ಯಾ ಖಂಡದಲ್ಲಿಯೇ ಅತಿ ದೊಡ್ಡ ಏಕಶಿಲಾ ಬೆಟ್ಟ.**

ಎ } ಸ್ಕಂದಗಿರಿ ಬಿ } ಮಧುಗಿರಿ

ಸಿ } ನಂದಗಿರಿ ಡಿ } ಮಲೆಮಹದೇಶ್ವರ ಬೆಟ್ಟ

**7 } ಭಾರತದ ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುತ್ತಿರುವ ವಲಯ.**

ಎ } ಕೈಗಾರಿಕಾ ವಲಯ ಬಿ } ಬ್ಯಾಂಕಿಂಗ್ ವಲಯ

ಸಿ } ಕೃಷಿ ವಲಯ ಡಿ } ಸೇವಾ ವಲಯ

**8 } ಭವಿಷ್ಯದ ಕಾರ್ಯಾಚರಣೆಯನ್ನು ಮುಂದಾಗಿ ನಿರ್ಧರಿಸುವುದು.**

ಎ } ಸಂಘಟನೆ ಬಿ } ನಿರ್ವಹಣೆ

ಸಿ } ಸಂಯೋಜನೆ ಡಿ } ಯೋಜನೆ

**2 } ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 8*1=08**

9 } ಪಾಶ್ಚಿಮಾತ್ಯ ಜಗತ್ತಿನ ಪ್ರಾಚೀನ ಧರ್ಮ ಯಾವುದು.?

10 } ಕಂಪಣನ ದಿಗ್ವಿಜಯದ ಬಗ್ಗೆ ತಿಳಿಸುವ ಕೃತಿ ಯಾವುದು.?

11 } ಹಣಕಾಸು ಮಸೂದೆಗೆ ರಾಜ್ಯಸಭೆ ಎಷ್ಟು ದಿನಗಳಲ್ಲಿ ಒಪ್ಪಿಗೆ ಕೊಡಬೇಕು.?

12 } ಕುಟುಂಬದ ಭಾವನಾತ್ಮಕ ಆಧಾರಗಳು ಯಾವುವು.?

13 } ಜಂಬಿಟ್ಟಿಗೆ ಮಣ್ಣು ಹೇಗೆ ನಿರ್ಮಾಣವಾಗುತ್ತದೆ.?

14 } ಕೃಷ್ಣಾ ನದಿಯು ಉತ್ತರ ಕರ್ನಾಟಕಕ್ಕೆ ವರದಾನವಾಗಿದೆ. ಹೇಗೆ.?

15 } 1991 ರ ನೂತನ ಆರ್ಥಿಕ ನೀತಿಯ ಮೂರು ಪ್ರಮುಖ ಅಂಶಗಳು ಯಾವುವು.?

16 } ಕ್ರಮಬದ್ಧವಾಗಿ ಕೆಲಸ ಹಂಚುವುದನ್ನು ಏನೆಂದು ಕರೆಯುತ್ತಾರೆ.?

**3 } ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಂಶಗಳಲ್ಲಿ ಉತ್ತರಿಸಿ. 8*2 =16**

17 } ಇಲ್ತುಮಿಷನ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ವಿವರಿಸಿ .?

18 } ವಿಜಯನಗರವನ್ನು ಆಳಿದ ರಾಜಮನೆತನಗಳನ್ನು ಹೆಸರಿಸಿ.?

19 } ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳೇನು.?

**ಅಥವಾ**

ರಾಜ್ಯಪಾಲರ ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳನ್ನು ತಿಳಿಸಿ.?

20 } ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯಲ್ಲಿ ಬಾಲ್ಯ ಮತ್ತು ಯೌವನದ ಪಾತ್ರವೇನು.?

**ಅಥವಾ**

ಕುಟುಂಬ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು.?

21 } ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವವು.?

22 } ಜಲವಿದ್ಯುತ್ ಉತ್ಪಾದನೆಯ ಪ್ರಾಮುಖ್ಯತೆಗಳೇನು.?

23 } ಭಾರತದ ಕೃಷಿಯಲ್ಲಿ ಕಂಡು ಬಂದ ವಾಣಿಜ್ಯೀಕರಣದ ಅಂಶಗಳನ್ನು ಬರೆಯಿರಿ.?

24 } ನಿರ್ವಹಣೆಯ ಕಾರ್ಯಕ್ಷೇತ್ರಗಳನ್ನು ವಿಶ್ಲೇಷಿಸಿ.?

**4 } ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 9*3 = 27**

25 } ಯಹೂದಿ ಧರ್ಮದ 10 ಕಟ್ಟಳೆಗಳನ್ನು ಪಟ್ಟಿ ಮಾಡಿ.?

26 } ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು ಯಾವವು.?

27 } ಎರಡನೇ ದೇವರಾಯನ ಸಾಧನೆಗಳೇನು.?

**ಅಥವಾ**

ವಿಜಯನಗರ ಕಾಲದ ಕಲೆ ಮತ್ತು ವಾಸ್ತು ಶಿಲ್ಪವನ್ನು ವಿವರಿಸಿ.?

28 } ರಾಜ್ಯಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು.?

29 } ಅವಿಭಕ್ತ ಕುಟುಂಬದ ಲಕ್ಷಣಗಳನ್ನು ಬರೆಯಿರಿ.?

30 } ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸವಕಳಿಯಿಂದಾಗಿ ಭೂಮಿಯ ಫಲವತ್ತತೆ ಕ್ಷೀಣಿಸುತ್ತಿದೆ, ನೀನೊಬ್ಬ ರೈತನಾದರೆ ಅದನ್ನು ನಿಯಂತ್ರಿಸುವಲ್ಲಿ ನಿನ್ನ ಪಾತ್ರವೇನು.?

31 } ಕರ್ನಾಟಕದಲ್ಲಿ ನೀರಾವರಿಯ ಪ್ರಗತಿಯನ್ನು ವಿವರಿಸಿ.?

**ಅಥವಾ**

ಇತ್ತೀಚಿನ ದಿನಗಳಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ. ಕಾರಣಗಳೇನು.?

32 } ಪುರಾತನ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳಾವವು.?

33 } ನಿರ್ವಹಣೆ ತೆಗೆದುಕೊಳ್ಳುವ ಪ್ರಾಮುಖ್ಯತೆಗಳೇನು.?

**5 } ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 4*4 =16**

34 } ಏಸು ಕ್ರಿಸ್ತರ ಜೀವನವನ್ನು ಕುರಿತು ವಿವರಿಸಿ.?

**ಅಥವಾ**

ಕಾಶ್ಮೀರದ ಕಾರ್ಕೋಟಕರಲ್ಲಿ ಲಲಿತಾದಿತ್ಯ ಮುಕ್ತಪೀಡನ ಸಾಧನೆಗಳೇನು.?

35 } ಬಸವಣ್ಣನವರು ಮಾಡಿದ ಕಲ್ಯಾಣ ಕಾರ್ಯಗಳು ಯಾವುವು.?

36 } ಭಾರತದ ಸಂವಿಧಾನದ ಲಕ್ಷಣಗಳನ್ನು ತಿಳಿಸಿ.?

37 } ಕರ್ನಾಟಕದ ಪೂರ್ವಾಭಿಮುಖವಾಗಿ ಹರಿಯುವ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಪಟ್ಟಿ ಮಾಡಿ.?

**38 } ನಿಮಗೆ ನೀಡಿರುವ ಕರ್ನಾಟಕದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ 5 ನ್ನು ಗುರುತಿಸಿ. 5*1=05**

ಎ } ಕೆನರಾ ಕರಾವಳಿ

ಬಿ } ಕರ್ನಾಟಕದ ಉತ್ತರದ ತುದಿ – ಔರಾದ

ಸಿ } ನವ ಮಂಗಳೂರು

ಡಿ } ಬೆಂಗಳೂರು

ಇ } ತುಂಗಭದ್ರಾ ನದಿ

ಎಫ್ } ತಲಕಾವೇರಿ

ಜಿ } ಮಧುಗಿರಿ

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್ – 2025 – 26

**ತರಗತಿ : 9 ನೇ ತರಗತಿ** **ವಿಷಯ : ಸಮಾಜ ವಿಜ್ಞಾನ**

**ಒಟ್ಟು ಅಂಕಗಳು : 80** **ಅವಧಿ : 3 ತಂಟೆ 15 ನಿಮಿಷ**

**1 } ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 8*1=08**

**1 } ಬೀದರ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದವರು. { ಸು }**

ಎ } ಮಧ್ವಾಚಾರ್ಯ ಬಿ } ರಾಮಾನುಜಾಚಾರ್ಯ

ಸಿ } ಬಸವೇಶ್ವರ ಡಿ } ಶಂಕರಾಚಾರ್ಯ

**2 } ದೆಹಲಿ ಸುಲ್ತಾನರಲ್ಲಿ ಆಳ್ವಿಕೆ ನಡೆಸಿದ ಮೊದಲ ಮಹಿಳೆ { ಸಾ }**

ಎ } ರಜಿಯಾ ಸುಲ್ತಾನ ಬಿ } ನರ್ಗಿಸ್ ಬಾನು

ಸಿ } ಮುಮ್ತಾಜ್ ಮಹಲ್ ಡಿ } ನೂರ ಜಹಾನ್

**3 } ಭಾರತದಲ್ಲಿ ಮೂಲಭೂತ ಹಕ್ಕುಗಳ ರಕ್ಷಕನಾಗಿ ಕಾರ್ಯ ನಿರ್ವಹಿಸುವುದು { ಕ }**

ಎ } ಕಾರ್ಯಾಂಗ ಬಿ } ಸರ್ವೋಚ್ಚ ನ್ಯಾಯಾಲಯ

ಸಿ } ಶಾಸಕಾಂಗ ಡಿ } ಪತ್ರಿಕಾಂಗ

**4 } ಈ ಸಮುದಾಯದಲ್ಲಿ ಮಾತೃ ಪ್ರಧಾನ ಕುಟುಂಬವು ಕಂಡು ಬರುತ್ತದೆ. { ಸಾ }**

ಎ } ಮರಾಠ ಬಿ } ನಾಯರ್

ಸಿ } ಜಾಟರು ಡಿ } ರಜಪೂತರು

**5 } ಕುಟುಂಬ ವ್ಯವಸ್ಥೆಯಲ್ಲಿ ಮೂರನೇ ಪೀಳಿಗೆಗೆ ಸೇರಲ್ಪಡುವವರು. { ಸಾ }**

ಎ } ರಕ್ತ ಸಂಬಂಧಿಗಳು ಬಿ } ಹಿರಿಯ ಪೋಷಕರು

ಸಿ } ಮಕ್ಕಳು ಡಿ } ಮೊಮ್ಮಕ್ಕಳು

**6 } ಏಷ್ಯಾ ಖಂಡದಲ್ಲಿಯೇ ಅತಿ ದೊಡ್ಡ ಏಕಶಿಲಾ ಬೆಟ್ಟ. { ಸಾ }**

ಎ } ಸ್ಕಂದಗಿರಿ ಬಿ } ಮಧುಗಿರಿ

ಸಿ } ನಂದಗಿರಿ ಡಿ } ಮಲೆಮಹದೇಶ್ವರ ಬೆಟ್ಟ

**7 } ಭಾರತದ ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುತ್ತಿರುವ ವಲಯ. { ಸು }**

ಎ } ಕೈಗಾರಿಕಾ ವಲಯ ಬಿ } ಬ್ಯಾಂಕಿಂಗ್ ವಲಯ

ಸಿ } ಕೃಷಿ ವಲಯ ಡಿ } ಸೇವಾ ವಲಯ

**8 } ಭವಿಷ್ಯದ ಕಾರ್ಯಾಚರಣೆಯನ್ನು ಮುಂದಾಗಿ ನಿರ್ಧರಿಸುವುದು. { ಸಾ }**

ಎ } ಸಂಘಟನೆ ಬಿ } ನಿರ್ವಹಣೆ

ಸಿ } ಸಂಯೋಜನೆ ಡಿ } ಯೋಜನೆ

**2 } ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 8*1=08**

9 } ಪಾಶ್ಚಿಮಾತ್ಯ ಜಗತ್ತಿನ ಪ್ರಾಚೀನ ಧರ್ಮ ಯಾವುದು.? { ಸಾ }

10 } ಕಂಪಣನ ದಿಗ್ವಿಜಯದ ಬಗ್ಗೆ ತಿಳಿಸುವ ಕೃತಿ ಯಾವುದು.? { ಸಾ }

11 } ಹಣಕಾಸು ಮಸೂದೆಗೆ ರಾಜ್ಯಸಭೆ ಎಷ್ಟು ದಿನಗಳಲ್ಲಿ ಒಪ್ಪಿಗೆ ಕೊಡಬೇಕು.? { ಸು }

12 } ಕುಟುಂಬದ ಭಾವನಾತ್ಮಕ ಆಧಾರಗಳು ಯಾವುವು? { ಸಾ }

13 } ಜಂಬಿಟ್ಟಿಗೆ ಮಣ್ಣು ಹೇಗೆ ನಿರ್ಮಾಣವಾಗುತ್ತದೆ.? { ಸಾ }

14 } ಕೃಷ್ಣಾ ನದಿಯು ಉತ್ತರ ಕರ್ನಾಟಕಕ್ಕೆ ವರದಾನವಾಗಿದೆ. ಹೇಗೆ.? { ಕ }

15 } 1991 ರ ನೂತನ ಆರ್ಥಿಕ ನೀತಿಯ ಮೂರು ಪ್ರಮುಖ ಅಂಶಗಳು ಯಾವುವು.? { ಕ }

16 } ಕ್ರಮಬದ್ಧವಾಗಿ ಕೆಲಸ ಹಂಚುವುದನ್ನು ಏನೆಂದು ಕರೆಯುತ್ತಾರೆ.? { ಸಾ }

**3 } ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಂಶಗಳಲ್ಲಿ ಉತ್ತರಿಸಿ. 8*2 =16**

17 } ಇಲ್ತಮಷನ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ವಿವರಿಸಿ .? { ಸಾ }

18 } ವಿಜಯನಗರವನ್ನು ಆಳಿದ ರಾಜಮನೆತನಗಳನ್ನು ಹೆಸರಿಸಿ.? { ಸು }

19 } ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳೇನು.? { ಸು }

**ಅಥವಾ**

ರಾಜ್ಯಪಾಲರ ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳನ್ನು ತಿಳಿಸಿ.?

20 } ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯಲ್ಲಿ ಬಾಲ್ಯ ಮತ್ತು ಯೌವನದ ಪಾತ್ರವೇನು.? { ಸಾ }

ಅಥವಾ

ಕುಟುಂಬ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು.?

21 } ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವವು.? { ಸು }

22 } ಜಲವಿದ್ಯುತ್ ಉತ್ಪಾದನೆಯ ಪ್ರಾಮುಖ್ಯತೆಗಳೇನು.? { ಸು }

23 } ಭಾರತದ ಕೃಷಿಯಲ್ಲಿ ಕಂಡು ಬಂದ ವಾಣಿಜ್ಯೀಕರಣದ ಅಂಶಗಳನ್ನು ಬರೆಯಿರಿ.? { ಸಾ }

24 } ನಿರ್ವಹಣೆಯ ಕಾರ್ಯಕ್ಷೇತ್ರಗಳನ್ನು ವಿಶ್ಲೇಷಿಸಿ.? { ಕ }

**4 } ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 9*3 = 27**

25 } ಯಹೂದಿ ಧರ್ಮದ 10 ಕಟ್ಟಳೆಗಳನ್ನು ಪಟ್ಟಿ ಮಾಡಿ.? { ಸಾ }

26 } ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು ಯಾವವು.? { ಸಾ }

27 } ಎರಡನೇ ದೇವರಾಯನ ಸಾಧನೆಗಳೇನು.? { ಸಾ }

ಅಥವಾ

ವಿಜಯನಗರ ಕಾಲದ ಕಲೆ ಮತ್ತು ವಾಸ್ತು ಶಿಲ್ಪವನ್ನು ವಿವರಿಸಿ.?

28 } ರಾಜ್ಯಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು.? { ಸು }

29 } ಅವಿಭಕ್ತ ಕುಟುಂಬದ ಲಕ್ಷಣಗಳನ್ನು ಬರೆಯಿರಿ.? { ಸು }

30 } ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸವಕಳಿಯಿಂದಾಗಿ ಭೂಮಿಯ ಫಲವತ್ತತೆ ಕ್ಷೀಣಿಸುತ್ತಿದೆ, ನೀನೊಬ್ಬ ರೈತನಾದರೆ ಅದನ್ನು ನಿಯಂತ್ರಿಸುವಲ್ಲಿ ನಿನ್ನ ಪಾತ್ರವೇನು.? { ಕ }

31 } ಕರ್ನಾಟಕದಲ್ಲಿ ನೀರಾವರಿಯ ಪ್ರಗತಿಯನ್ನು ವಿವರಿಸಿ.? { ಸಾ }

ಅಥವಾ

ಇತ್ತೀಚಿನ ದಿನಗಳಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ. ಕಾರಣಗಳೇನು.?

32 } ಪುರಾತನ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳಾವವು.? { ಸು }

33 } ನಿರ್ವಹಣೆ ತೆಗೆದುಕೊಳ್ಳುವ ಪ್ರಾಮುಖ್ಯತೆಗಳೇನು.? { ಸಾ }

**5 } ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 4*4 =16**

34 } ಏಸು ಕ್ರಿಸ್ತರ ಜೀವನವನ್ನು ಕುರಿತು ವಿವರಿಸಿ.? { ಸಾ }

ಅಥವಾ

ಕಾಶ್ಮೀರದ ಕಾರ್ಕೋಟಕರಲ್ಲಿ ಲಲಿತಾದಿತ್ಯ ಮುಕ್ತಪೀಡನ ಸಾಧನೆಗಳೇನು.?

35 } ಬಸವಣ್ಣನವರು ಮಾಡಿದ ಕಲ್ಯಾಣ ಕಾರ್ಯಗಳು ಯಾವುವು.? { ಸಾ }

36 } ಭಾರತದ ಸಂವಿಧಾನದ ಲಕ್ಷಣಗಳನ್ನು ತಿಳಿಸಿ.? { ಸು }

37 } ಕರ್ನಾಟಕದ ಪೂರ್ವಾಭಿಮುಖವಾಗಿ ಹರಿಯುವ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಪಟ್ಟಿ ಮಾಡಿ.? { ಸಾ }

**38 } ನಿಮಗೆ ನೀಡಿರುವ ಕರ್ನಾಟಕದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ 5 ನ್ನು ಗುರುತಿಸಿ. { ಕ } 5*1=05**

ಎ } ಕೆನರಾ ಕರಾವಳಿ

ಬಿ } ಕರ್ನಾಟಕದ ಉತ್ತರದ ತುದಿ – ಔರಾದ

ಸಿ } ನವ ಮಂಗಳೂರು

ಡಿ } ಬೆಂಗಳೂರು

ಇ } ತುಂಗಭದ್ರಾ ನದಿ

ಎಫ್ } ತಲಕಾವೇರಿ

ಜಿ } ಮಧುಗಿರಿ

ಸೂಚನೆ :- ಈ ಪ್ರಶ್ನೆ ಪತ್ರಿಕೆಯನ್ನು ಇಲಾಖೆ ಅರ್ಧವರ್ಷಕ್ಕೆ ನಿಗದಿಪಡಿಸಿದ ಶೇಕಡಾ 40 % ರಷ್ಟು ಪಠ್ಯ ವಿಷಯ ವಸ್ತುವಿನ ಆಧಾರದ ಮೇಲೆ ಹಾಗೂ ಸುಲಭ - 30 % ಸಾದಾರಣ – 50 % ಕಠಿಣ- 20 % ರಷ್ಟು ಪ್ರಶ್ನೆಗಳನ್ನು ಒಳಗೊಂಡಂತೆ ರಚಿಸಲಾಗಿದೆ,

## *9 ನೇ ತರಗತಿ ಸಮಾಜ ವಿಜ್ಞಾನ – 2025 – 26 - ಮಾದರಿ ಉತ್ತರ ಪತ್ರಿಕೆ*

**1 } ಸಿ } ಬಸವೇಶ್ವರ**

**2 } ಎ } ರಜಿಯಾ ಸುಲ್ತಾನ**

**3 } ಬಿ } ಸರ್ವೋಚ್ಛ ನ್ಯಾಯಾಲಯ**

**4 } ಬಿ } ನಾಯರ್**

**5 } ಡಿ } ಮೊಮ್ಮಕ್ಕಳು**

**6 } ಬಿ } ಮಧುಗಿರಿ**

**7 } ಡಿ } ಸೇವಾ ವಲಯ**

**8 } ಡಿ } ಯೋಜನೆ**

**9 } ಯಹೂದಿ ಧರ್ಮ**

**10 } ಮಧುರಾ ವಿಜಯಂ**

**11 } 14 ದಿನಗಳಲ್ಲಿ ಒಪ್ಪಿಗೆ ನೀಡಬೇಕು.**

**12 } ಕುಟುಂಬದ ಭಾವನಾತ್ಮಕ ಆಧಾರಗಳು**
- ಮಾತೃಪ್ರೇಮ
- ಪಿತೃ ವಾತ್ಸಲ್ಯ
- ಪತಿ ಪತ್ನಿಯರ ಅನುರಾಗ
- ಮಕ್ಕಳನ್ನು ಪಡೆದು ಪಾಲನೆ ಪೋಷಣೆ ಮಾಡಬೇಕೆಂಬ ಅಭಿಲಾಷೆ

13 } ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಮೇಲ್ಪದರದ ಸವೆತದಿಂದ ಜಂಬಿಟ್ಟಿಗೆ ಮಣ್ಣು ರಚನೆಯಾಗುತ್ತದೆ.

14 } ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆ ವರದಾನವಾಗಿರುವುದರಿಂದ,

**15 } 1991ರ ನೂತನ ಆರ್ಥಿಕ ನೀತಿಯ ಮೂರು ಪ್ರಮುಖ ಅಂಶಗಳು**
- ಖಾಸಗೀಕರಣ,
- ಜಾಗತೀಕರಣ,
- ಉದಾರೀಕರಣ

16 } ಕಾರ್ಯ ವಿಭಜನೆ ಎನ್ನುವರು.

17 } **ಇಲ್ತಮಶನ ಆಡಳಿತ ವ್ಯವಸ್ಥೆ**
- ಇಲ್ತಮಷ್ ತನ್ನ ರಾಜ್ಯವನ್ನು ಇಕ್ತಾಗಳಾಗಿ ವಿಂಗಡಿಸಿದನು
- ಆಡಳಿತವನ್ನು ನಡೆಸಲು ಇತ್ತಾದಾರರನ್ನು ನೇಮಿಸಿದನು .
- ಆಡಳಿತಾತ್ಮಕ ವಿಷಯಗಳಲ್ಲಿ ಅವನಿಗೆ ಸಲಹೆ ನೀಡಲು ಅವನು 40 ಸರ್ದಾರರ ಗುಂಪನ್ನು ನೇಮಿಸಿದನು .
- ಪ್ರಧಾನ ಮಂತ್ರಿ . ನ್ಯಾಯಾಧೀಶರು ಅವನಿಗೆ ಸಲಹೆ ನೀಡುತ್ತಿದ್ದರು
- ಇಲ್ತಮಷ್ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದನು.

18 } **ವಿಜಯನಗರವನ್ನು ಆಳಿದ ರಾಜಮನೆತನಗಳು,**
- ಸಂಗಮ ,
- ಸಾಳುವ,
- ತುಳುವ,
- ಅರವೀಡು,

19 } **ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳು**
- ಭಾರತದ ಪ್ರಜೆಯಾಗಿರಬೇಕು
- 35 ವರ್ಷ ವಯಸ್ಸು ಪೂರ್ಣಗೊಂಡಿರಬೇಕು
- ಯಾವುದೇ ಲಾಭದಾಯಕ ಹುದ್ದೆಯಲ್ಲಿ ಇರಬಾರದು
- ಸಂಸತ್ತು ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು.

**ಅಥವಾ**

**ರಾಜ್ಯಪಾಲರ ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು ತಿಳಿಸಿ.**
- ರಾಜ್ಯಪಾಲರ ಪೂರ್ವಾನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವಂತಿಲ್ಲ
- ರಾಜ್ಯ ಹಣಕಾಸು ಆಯೋಗ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ರಚಿಸುವ ಅಧಿಕಾರವಿದೆ
- ರಾಜ್ಯದ ತುರ್ತು ನಿಧಿಯಿಂದ ಬರ ಪ್ರವಾಹ ಭೂಕಂಪದಂತಹ ಆಕಸ್ಮಿಕ ಘಟನೆಗಳನ್ನು ನಿಭಾಯಿಸಲು ಹಣ ಬಿಡುಗಡೆ ಮಾಡುವ ಅಧಿಕಾರವಿದೆ
- ರಾಜ್ಯದ ಸಂಚಿತ ನಿಧಿಯು ಇವರ ನಿಯಂತ್ರಣದಲ್ಲಿದೆ.

20 } **ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯಲ್ಲಿ ಬಾಲ್ಯ ಮತ್ತು ಯೌವ್ವನದ ಪಾತ್ರ.**
- ಮಾತೃ ಭಾಷೆಯನ್ನು ಮಗು ಮೊದಲು ತಿಳಿಯುವುದಲ್ಲದೆ ಮೂಲ ಸಾಮಾಜಿಕ ವಿಚಾರಗಳನ್ನು ತಿಳಿಯುತ್ತದೆ
- ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಬೆಳೆದ ಮಗು ಅದಕ್ಕೆ ಅನುಗುಣವಾದ ಲಕ್ಷಣಗಳನ್ನು ಬೆಳೆಸಿಕೊಳ್ಳುತ್ತದೆ
- ಸಮವಯಸ್ಸಿನ ಮಕ್ಕಳೊಂದಿಗೆ ಸ್ನೇಹ ಸಂಬಂಧ ಬೆಳೆಸಿಕೊಳ್ಳುತ್ತದೆ
- ಎಲ್ಲರೊಂದಿಗೆ ಬೆರೆತು ಮುಂದಾಳತ್ವದ ಗುಣಗಳನ್ನು ರೂಢಿಸಿಕೊಳ್ಳುತ್ತದೆ
- ಸಾಮಾಜಿಕ ವರ್ತನೆ ಬೇಡಿಕೆ, ಕಟ್ಟಲೆಗಳು ಮಗುವಿನ ಮೇಲೆ ಪ್ರಭಾವ
- ಯೌವ್ವನದಲ್ಲಿ ಸ್ನೇಹ ಸ್ವಾತಂತ್ರ್ಯ, ಭದ್ರತೆ ಅಂಗೀಕಾರ ಇವುಗಳಿಗಾಗಿ ಹಾತೊರೆಯುತ್ತಾರೆ
- ಈ ವಯಸ್ಸಿನಲ್ಲಿ ಬೆಳೆಸಿಕೊಂಡ ವರ್ತನೆ ಹಾಗೂ ಅಭಿಪ್ರಾಯಗಳು ಪ್ರೌಢ ಹಾಗೂ ಮುತ್ತಿನ ಕಾಲದವರೆಗೂ ಮುಂದುವರೆಯುತ್ತವೆ.

**ಅಥವಾ**

**ಕುಟುಂಬ ವ್ಯವಸ್ಥೆಯ ಪ್ರಮುಖ ಲಕ್ಷಣಗಳು**
- ಕುಟುಂಬವು ಸಾರ್ವತ್ರಿಕವಾಗಿದೆ
- ಸಮಾಜದ ಎಲ್ಲ ವ್ಯವಸ್ಥೆಗಳಿಗೂ ಕೇಂದ್ರವಾಗಿದೆ
- ಕುಟುಂಬಗಳಿಂದಲೇ ನೆರೆಹೊರೆ ಗ್ರಾಮ ನಗರ ರಾಷ್ಟ್ರ ನಿರ್ಮಾಣಗೊಂಡಿದೆ
- ಕುಟುಂಬವು ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಸುತ್ತದೆ
- ಸಮಾಜದ ಸಂಪ್ರದಾಯ ನೈತಿಕ ನಿಯಮ ವರ್ತನೆಗಳನ್ನು ನಿಯಂತ್ರಿಸುತ್ತದೆ
- ಸರ್ವ ವ್ಯಾಪಿ ಶಾಶ್ವತ ಹಾಗೂ ಪರಂಪರಾಗತ ಘಟಕವಾಗಿದೆ.

21 } **ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳು.**
- ಶಿರಾಡಿ ಘಾಟ
- ಆಗುಂಬೆ ಘಾಟ
- ಹುಲಿಕಲ್ ಘಾಟ
- ಚಾರ್ಮಾಡಿ ಘಾಟ

22 } **ಜಲ ವಿದ್ಯುತ್ ಉತ್ಪಾದನೆಯ ಪ್ರಾಮುಖ್ಯತೆಗಳು**
- ಕೃಷಿ ಕೈಗಾರಿಕೆ ವಾಣಿಜ್ಯೋದ್ಯಮಕ್ಕೆ ಉಪಯುಕ್ತ
- ಸಾಂಪ್ರದಾಯಿಕ ಶಕ್ತಿ ಮೂಲಗಳ ಕೊರತೆ ಇರುವುದರಿಂದ.

23 } **ಭಾರತದ ಕೃಷಿಯಲ್ಲಿ ಕಂಡು ಬಂದ ವಾಣಿಜ್ಯೀಕರಣದ ಅಂಶಗಳು**
- ಭಾರತೀಯ ರೈತರು ಜೀವನಾಧಾರ ಬೇಸಾಯದಿಂದ ಮಾರುಕಟ್ಟೆ ಗಾಗಿ ಬೆಳೆಗಳನ್ನು ಬೆಳೆಯಲು ಮುಂದಾದರು

- ವಾಣಿಜ್ಯ ಬೆಳೆಗಳಾದ ಹತ್ತಿ ಕಬ್ಬು ಸೆಣಬು ಮತ್ತು ಸಾಂಬಾರ ಪದಾರ್ಥಗಳು ಪ್ರಾಮುಖ್ಯತೆ ಪಡೆದವು
- ಕೃಷಿಯಾಧಾರಿತ ಕೈಗಾರಿಕೆಗಳಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರು ಮುಂದಾದರು.

24 } **ನಿರ್ವಹಣೆಯ ಕಾರ್ಯಕ್ಷೇತ್ರಗಳು**
- ಯೋಜನೆ
- ಸಂಘಟನೆ
- ಸಿಬ್ಬಂದಿ ಪೂರೈಕೆ
- ನಿರ್ದೇಶನ
- ಸಂಯೋಜನೆ
- ನಿಯಂತ್ರಣ

25 } **ಯಹೂದಿ ಧರ್ಮದ 10 ನಿಯಮಗಳು**
- ಯಾವೇ ಹೊರತಾಗಿ ಬೇರೆ ದೇವರಿಲ್ಲ
- ಮೂರ್ತಿ ಪೂಜೆ ಸಲ್ಲದು,
- ದೇವರ ಹೆಸರಿಗೆ ಕಳಂಕ ತರಬಾರದು
- ಸಬ್ಬತ್ ದಿನವನ್ನು ಪವಿತ್ರವೆಂದು ಕಾಣುವುದು
- ತಂದೆ.ತಾಯಿಯನ್ನು ಗೌರವಿಸಬೇಕು,
- ವ್ಯಭಿಚಾರ ಸಲ್ಲದು
- ಕಳ್ಳತನ ಮಾಡಬಾರದು
- ಕೊಲೆ ಮಾಡಬಾರದು
- ಸುಳ್ಳು ಹೇಳಬಾರದು
- ಅಸೂಯೆ ಪಡಬಾರದು

26 } **ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು**
- ಉಪನಿಷತ್ತುಗಳು ಮತ್ತು ಬ್ರಹ್ಮ ಸೂತ್ರಗಳನ್ನು ಆಳವಾಗಿ ಅಧ್ಯಯನ ಮಾಡಿ ಅದ್ವೈತ ತತ್ವ ಪ್ರತಿಪಾದಿಸಿದರು
- ಜಗತ್ತು ಮಾಯೆ ಒಂದು ಭ್ರಮೆ ಎಂದು ಕರೆದರು ಬ್ರಹ್ಮವೇ ಪರಮ ಸತ್ಯ
- ಆತ್ಮ, ಪರಮಾತ್ಮ ಒಬ್ಬರೇ ಆದ್ದರಿಂದ ಅಹಂ ಬ್ರಹ್ಮಾಸ್ಮಿ ಎಂದರು
- ಇದರ ಅರ್ಥ ನಾನು ಬ್ರಹ್ಮ ಅಥವಾ ದೇವರು ಅಂದರೆ ದೇವರು ನಮ್ಮೊಳಗಿದ್ದಾನೆ
- ನಾವು ಜ್ಞಾನದ ಹಾದಿಯಲ್ಲಿ ಸಾಗಬೇಕು ಮತ್ತು ಪ್ರಪಂಚದ ಸ್ವರೂಪವನ್ನು ಅರಿತುಕೊಳ್ಳಬೇಕು
- ನಾವು ನಮ್ಮ ಆತ್ಮವನ್ನು ಸಂಪೂರ್ಣ ಸತ್ಯವಾದ ಬ್ರಹ್ಮದೊಂದಿಗೆ ವಿಲೀನಗೊಳಿಸಬೇಕು

27 } **ಎರಡನೇ ದೇವರಾಯನ ಸಾಧನೆಗಳು**
- ಸಂಗಮ ವಂಶದ ಪ್ರಸಿದ್ಧ ರಾಜ 2ನೇ ದೇವರಾಯ
- ಗಜಬೇಂಟೆಕಾರ ಎಂಬ ಬಿರುದಿತ್ತು
- ಒರಿಸ್ಸಾದ ಗಜಪತಿ ಕಪಿಲೇಂದ್ರನನ್ನು ಸೋಲಿಸಿದನು
- ಗಡಿಯಲ್ಲಿ ಪ್ರಾದೇಶಿಕ ನಾಯಕರನ್ನು ನಿಗ್ರಹಿ ಈಶಾನ್ಯದಲ್ಲಿ ಕೃಷ್ಣಾ ನದಿವರೆಗೆ ರಾಜ್ಯ ವಿಸ್ತರಿಸಿದನು
- ಕೇರಳದ ಆಡಳಿತಗಾರರನ್ನು ಸೋಲಿಸಿ ಕೇರಳ ಮತ್ತು ಶ್ರೀಲಂಕಾದಿಂದ ರಾಜ್ಯ ಪ್ರಭುತ್ವವನ್ನು ಪಡೆದನು
- ಇದು ಈತನಿಗೆ ದಕ್ಷಿಣ ಪಥದ ಚಕ್ರವರ್ತಿ ಎಂಬ ಬಿರುದನ್ನು ನೀಡಿತು
- ಶ್ರೀಲಂಕಾದಿಂದ ಗುಲ್ಬರ್ಗ, ತೆಲಂಗಾಣ ಮಲಬಾರ್ವರಿಗೆ ರಾಜ್ಯ ವಿಸ್ತರಣೆ

ಅಥವಾ

**ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ**
- ಚಾಲುಕ್ಯರು ಚೋಳರು ಹೊಯ್ಸಳರ ವಾಸ್ತುಶಿಲ್ಪ ಶೈಲಿಯನ್ನು ಮುಂದುವರಿಸಿದರು
- ವಿಶಾಲ ಸಭಾ ಮಂಟಪ ಮತ್ತು ಕಲ್ಯಾಣ ಮಂಟಪಗಳ ನಿರ್ಮಾಣ
- ದೇವಾಲಯಗಳು ಬೃಹತ್ ಗೋಪುರಗಳು ಪತ್ರಾಕೃತಿಯ ಕಮಾನುಗಳು ಮತ್ತು ಮಂಟಪಗಳನ್ನು ಹೊಂದಿದ್ದವು
- ಹಂಪಿ ಶೃಂಗೇರಿ ತಿರುಪತಿ ಲೇಪಾಕ್ಷಿ, ಕಾರ್ಕಳ ಮೂಡಬಿದ್ರಿ ಭಟ್ಕಳ ಕಾಳಹಸ್ತಿ ನಂದಿ ಶ್ರೀಶೈಲಗಳಲ್ಲಿ ದೇವಾಲಯಗಳು ನಿರ್ಮಾಣ
- ಶೃಂಗೇರಿಯ ವಿದ್ಯಾಶಂಕರ ದೇವಾಲಯ ರಚನೆಯು ಭಾರತದಲ್ಲಿಯೇ ವಿಶಿಷ್ಟವಾಗಿದೆ
- ವಿಜಯನಗರದ ಅತ್ಯಂತ ಪ್ರಾಚೀನ ದೇವಾಲಯ ಹಂಪಿಯಲ್ಲಿರುವ ವಿರೂಪಾಕ್ಷ ದೇವಾಲಯ
- ಹಂಪಿಯ ವಿಜಯ ವಿಠಲ ದೇವಾಲಯ ವಾಸ್ತುಶಿಲ್ಪವು ಸುಂದರವಾಗಿದೆ .

28 } **ರಾಜ್ಯ ಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು**
- ಭಾರತದ ಪ್ರಜೆಯಾಗಿರಬೇಕು
- 30 ವರ್ಷ ವಯಸ್ಸು ಪೂರ್ಣಗೊಂಡಿರಬೇಕು
- ಲಾಭದಾಯಕ ಹುದ್ದೆಯಲ್ಲಿ ಇರಬಾರದು
- ನ್ಯಾಯಾಂಗದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು .
- ದಿವಾಳಿಯಾಗಿರಬಾರದು ,
- ಮಾನಸಿಕ ಅಸ್ವಸ್ಥತೆ ಹೊಂದಿರಬಾರದು .
- ಕಾಲಕಾಲಕ್ಕೆ ಸಂಸತ್ತು ನಿಗದಿ ಪಡಿಸುವ ಅರ್ಹತೆಗಳನ್ನು ಹೊಂದಿರಬೇಕು.

29 } **ಅವಿಭಕ್ತ ಕುಟುಂಬದ ಲಕ್ಷಣಗಳು**
- ಕುಟುಂಬದ ಗಾತ್ರವು ದೊಡ್ಡದಾಗಿರುತ್ತದೆ
- ಸದಸ್ಯರೆಲ್ಲರೂ ಆಸ್ತಿಯ ಮಾಲೀಕತ್ವ ಹೊಂದಿರುತ್ತಾರೆ ,
- ಸದಸ್ಯರು ಸಾಮಾನ್ಯ ವಾಗಿ ಒಂದೇ ಛಾವಣಿಯಲ್ಲಿ ವಾಸಿಸುತ್ತಾರೆ
- ಒಂದೇ ಅಡಿಗೆ ಮನೆಯಲ್ಲಿ ಆಹಾರ ಸಿದ್ಧಪಡಿಸಿ ಸೇವಿಸುತ್ತಾರೆ
- ಒಂದೇ ಧರ್ಮವನ್ನು ನಂಬುತ್ತಾರೆ
- ಸ್ವಯಂ ಪೂರ್ಣ ಘಟಕವಾಗಿದೆ
- ಹಿರಿಯ ಸದಸ್ಯರು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ.

30 } **ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸವಕಳಿಯಿಂದಾಗಿ ಭೂಮಿಯ ಫಲವತ್ತತೆ ಕ್ಷೀಣಿಸುತ್ತಿದೆ ನೀನೊಬ್ಬ ರೈತನಾದರೆ ಅದನ್ನು ನಿಯಂತ್ರಿಸುವಲ್ಲಿ ನಿನ್ನ ಪಾತ್ರ**
- ಅಡ್ಡ ಬದುಗಳ ನಿರ್ಮಾಣ
- ವೈಜ್ಞಾನಿಕ ಬೇಸಾಯ
- ಅನುಸರಣೆ
- ಅರಣ್ಯೀಕರಣ ಮಣ್ಣು ಪರೀಕ್ಷೆ
- ಹನಿ ಮತ್ತು ತುಂತುರು ನೀರಾವರಿ ಅನುಸರಣೆ

31 } **ಕರ್ನಾಟಕದ ನೀರಾವರಿ ಪ್ರಗತಿ**
- ಪುರಾತನ ಕಾಲದಲ್ಲಿ ಬಾವಿಗಳಲ್ಲಿ ನೀರನ್ನು ಸಂಗ್ರಹಿಸಿ ನೀರಾವರಿ ಮಾಡಲಾಗುತ್ತಿತ್ತು
- ಕೆರೆಗಳನ್ನು ನಿರ್ಮಿಸಿ ನೀರಾವರಿ ಮಾಡಲಾಯಿತು .
- ವಿಜಯನಗರ ಮೈಸೂರು ಅರಸರ ಕಾಲದಲ್ಲಿ ಕಾಲುವೆ ನೀರಾವರಿ ಜನಪ್ರಿಯಗೊಂಡಿತು
- ಇತ್ತೀಚಿಗೆ ಕೊಳವೆ ಬಾವಿಗಳ ಪ್ರಮಾಣ ಹೆಚ್ಚುತ್ತಿದೆ.

**ಅಥವಾ**

**ಇತ್ತೀಚಿನ ದಿನಗಳಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ ಇದಕ್ಕೆ ಕಾರಣವಾದ ಅಂಶಗಳು**
- ಅಕಾಲಿಕ ಮಳೆ
- ಅನಿಶ್ಚಿತ ಮಳೆ
- ಅಸಮಾನ ಮಳೆ ಹಂಚಿಕೆ ,
- ನಗರೀಕರಣ
- ಅರಣ್ಯ ನಾಶ
- ಅಧಿಕ ಕೊಳವೆ ಬಾವಿಗಳ ಕೊರೆಸುವಿಕೆ.

32 } **ಪುರಾತನ ಅರ್ಥ ವ್ಯವಸ್ಥೆಯ ಪ್ರಮುಖ ಲಕ್ಷಣಗಳು**
- ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿತ್ತು
- ಬಹುತೇಕ ಜನರು ಕೃಷಿಯನ್ನು ಅವಲಂಬಿಸಿದ್ದರು .
- ಕೃಷಿಯು ಜೀವನಾಧಾರ ಬೇಸಾಯವಾಗಿತ್ತು

- ಇಲ್ಲಿ ರೈತರು ತಮಗೆ ಅಗತ್ಯಕ್ಕೆ ತಕ್ಕ ಆಹಾರವನ್ನು ಅಷ್ಟೇ ಬೆಳೆಯುತ್ತಿದ್ದರು
- ಜನರ ಬಯಕೆಗಳು ಕಡಿಮೆ ಇದ್ದವು
- ಜನರ ಬದುಕು ಸರಳವಾಗಿತ್ತು
- ಶ್ರಮ ವಿಭಜನೆ ಅಷ್ಟಾಗಿ ಬಳಕೆಯಲ್ಲಿ ಇರಲಿಲ್ಲ
- ವಸ್ತುವಿನ ಪದ್ಧತಿ ಬಳಕೆಯಲ್ಲಿತ್ತು

33 } **ನಿರ್ಧಾರ ತೆಗೆದುಕೊಳ್ಳುವ ಪ್ರಾಮುಖ್ಯತೆಗಳು**

- ಸಮಸ್ಯೆ ವಿಶ್ಲೇಷಣೆ
- ಯೋಜನೆ
- ಧೈರ್ಯ
- ತಾಳ್ಮೆ
- ಮುಂದಾಲೋಚನೆ
- ವಿವೇಕ ಯುತ ನಿರ್ಧಾರ

34 } **ಏಸುಕ್ರಿಸ್ತರ ಜೀವನ**

- ಜೆರುಸಲೆಂ ಸಮೀಪ ಬೆತ್ಲೆಹೆಂನಲ್ಲಿ ಜನನ
- ತಂದೆ ಜೋಸೆಫ್. ತಾಯಿ ಮೇರಿ
- ಅರಾಮಿಕ್.ಸೆಮಿಟಿಕ್ ಭಾಷೆ ಬಲ್ಲವರಾಗಿದ್ದರು
- ಜಾನ್ ನಿಂದ ದೀಕ್ಷಾಸ್ನಾನ ಪಡೆದರು
- ಜಾನ್ ಜೀಸಸ್ ರನ್ನು ಮಸಿಹ. ಮಹಾರಕ್ಷಕ ಎಂದು ಕರೆದರು
- ಇಸ್ರೇಲ್ ನಲ್ಲಿ ಯಹೂದಿಗಳು ಜೀಸಸ್ ರನ್ನು ಧಾರ್ಮಿಕ ಮುಕಂಡನನ್ನಾಗಿ ಸ್ವೀಕರಿಸಿದರು
- ಜೀಸಸ್ ನ ಮೊದಲ 12 ಜನ ಶಿಷ್ಯರನ್ನು **ಅಪೋಸಲ್ಸ್** ಎನ್ನುವರು. ಪೀಟರ್ ಮೊದಲ ಶಿಷ್ಯ
- ರೋಗದಿಂದ ನರಳುವವರ. ದೀನ ದಲಿತರ ಬಗ್ಗೆ ಕರುಣೆ
- ರೋಮನ ರಾಜ ಮರಣದಂಡನೆ ಶಿಕ್ಷೆ ವಿಧಿಸಿದನು.
- ಗೋಲ್ಗೋಥಾ ಬೆಟ್ಟದಲ್ಲಿ ಯೇಸುನನ್ನು ಶಿಲುಬೇಗೆರಿಸಲಾಯಿತು.

**ಅಥವಾ**

**ಕಾಶ್ಮೀರದ ಕಾರ್ಕೋಟಕರಲ್ಲಿ ಲಲಿತಾದಿತ್ಯ ಮುಕ್ತ ಫೀಡನ ಸಾಧನೆಗಳು**

- ಲಲಿತಾದಿತ್ಯ ಮುಕ್ತಪೀಡನು 36 ವರ್ಷಗಳ ಕಾಲ ಆಳ್ವಿಕೆ ನಡೆಸಿದನು
- ಕಾರ್ಕೋಟಕ ಸಾಮ್ರಾಜ್ಯದ ಗಡಿ ವಿಸ್ತರಿಸಿದನು
- ಈತ ಹುಟ್ಟಿನಿಂದಲೇ ಧೈರ್ಯಶಾಲಿ ಮಹತ್ವಕಾಂಕ್ಷೆ ಉಳ್ಳವನಾಗಿದ್ದ
- ಕನೋಜದ ಯಶೋವರ್ಮನನ್ನು ಸೋಲಿಸಿದನು
- ಷಾಯಿ ರಾಜವಂಶವನ್ನು ಸೋಲಿಸಿ ಕಾಬುಲ್ ಮೇಲೆ ಪ್ರಾಬಲ್ಯ ಸ್ಥಾಪಿಸಿದ
- ವಿಂದ್ಯಾಚಲದ ರಾಜರೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಉಳಿಸಿಕೊಂಡು ಯಾರೂ ಶತ್ರುಗಳಾಗದಂತೆ ನೋಡಿಕೊಂಡನು
- ರಾಷ್ಟ್ರಕೂಟರೊಂದಿಗೆ ಸ್ನೇಹ ಸಂಬಂಧಗಳನ್ನು ಬೆಳೆಸಿಕೊಂಡನು
- ತನ್ನ ಸಾಮ್ರಾಜ್ಯದ ಪ್ರಭಾವ ಪೂರ್ವದಲ್ಲಿ ಬಂಗಾಳದವರೆಗೆ ವಿಸ್ತರಿಸಿದ
- ಚೀನಾದ ಟಾಂಗ್ ರಾಜರೊಂದಿಗೆ ಸ್ನೇಹ ಬೆಳೆಸಿದರು.

35 } **ಬಸವಣ್ಣನವರು ಮಾಡಿದ ಕಲ್ಯಾಣ ಕಾರ್ಯಗಳು**

- ಆಚರಣೆ, ಮೂಡನಂಬಿಕೆ ಮತ್ತು ಕುರುಡು ನಂಬಿಕೆಗಳ ಖಂಡನೆ
- ಆರ್ಥಿಕ, ಸಾಮಾಜಿಕ, ಧಾರ್ಮಿಕ ಸುಧಾರಣೆಗಳನ್ನು ತರಲು ಪ್ರಯತ್ನ
- ಸಮಾಜ ಸುಧಾರಣೆಯ ಜೊತೆಗೆ ಆತ್ಮ ಸುಧಾರಣೆಗೂ ಶ್ರಮಿಸಿದರು
- ದೇಹವು ದೇವಾಲಯ ಮತ್ತು ಅರಿವೇ ಗುರು ಎಂಬ ಪರಿಕಲ್ಪನೆ ಯೊಂದಿಗೆ ಇಷ್ಟಲಿಂಗ ರೂಪದಲ್ಲಿ ಏಕದೇವರ ಕಲ್ಪನೆ ಪ್ರತಿಪಾದನೆ
- ಕಾಯಕ, ದಾನ ,ಇಷ್ಟ ಲಿಂಗದಂತಹ ಹೊಸ ಪರಿಕಲ್ಪನೆಗಳ ಪರಿಚಯ
- ಶಾಶ್ವತವಾದದ್ದು ನಾಶವಾಗುತ್ತದೆ ಕ್ಷಣಿಕವಾದದ್ದು ಉಳಿಯುತ್ತದೆ ದೇಹವು ಶಿವನ ವಾಸಸ್ಥಾನ
- ಕೆಲಸದ ಸಂಸ್ಕೃತಿಯನ್ನು ಎತ್ತಿ ಹಿಡಿದರು
- ದಾಸೋಹ ತತ್ವದ ಮೂಲಕ ಸಂಗ್ರಹಣೆ ಸಂಸ್ಕೃತಿಯನ್ನು ತೆಗೆದು ಹಾಕಿದರು
- ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪ್ರಚಾರ ಮಾಡಿದರು.

36 } **ಭಾರತದ ಸಂವಿಧಾನದ ಲಕ್ಷಣಗಳು**

- ಲಿಖಿತ ಮತ್ತು ಬೃಹತ್ ಸಂವಿಧಾನ
- ಭಾಗಶಃ ನಮ್ಯ ಮತ್ತು ಭಾಗಶಃ ಅನನ್ಯ ಸಂವಿಧಾನ
- ಸಂಸದೀಯ ಸರ್ಕಾರ ಪದ್ಧತಿ ,
- ಗಣತಂತ್ರ ವ್ಯವಸ್ಥೆ
- ಒಕ್ಕೂಟ ವ್ಯವಸ್ಥೆ
- ಮೂಲಭೂತ ಹಕ್ಕುಗಳು
- ಮೂಲಭೂತ ಕರ್ತವ್ಯಗಳು
- ರಾಜ್ಯನೀತಿ ನಿರ್ದೇಶಕ ತತ್ವಗಳು
- ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ
- ಏಕಪೌರತ್ವ
- ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ
- ದ್ವಿ ಸದನ ಶಾಸಕಾಂಗ

**37 } ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು**

- ಶರಾವತಿ,
- ಕಾಳಿ,
- ಗಂಗಾವಳಿ,
- ನೇತ್ರಾವತಿ,
- ವರಾಹಿ,
- ಅಘನಾಶಿನಿ.

**ಪೂರ್ವಭಿಮುಕವಾಗಿ ಹರಿಯುವ ನದಿಗಳು**

ಕೃಷ್ಣಾ,
ಕಾವೇರಿ,
ಪೆನ್ನಾರ್.
ಪಾಲಾರ್,
ಹೇಮಾವತಿ,
ಹಾರಂಗಿ,